**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**

**ಹಾಗು ವಿಶೇಷ ನ್ಯಾಯಾಲಯ. ಹಾವೇರಿ**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ಸಿ/ಎಸ್.ಟಿ.42/2025**

**ಪಿರ್ಯಾದಿಃ** ಆಡೂರು ಪೊಲೀಸ್ ಠಾಣೆ

**-ವಿರುದ್ಧ-**

**ಆರೋಪಿತರುಃ**

1. ಮಾರುತಿ ಫಕ್ಕೀರಪ್ಪ ಸುಣಗಾರ
ವಯಸ್ಸುಃ 42 ವರ್ಷ,

3. ಕೃಷ್ಣಪ್ಪ ಶಿವಪುತ್ರಪ್ಪ ಸುಣಗಾರ
ವಯಸ್ಸುಃ 45 ವರ್ಷ,

6. ಗಣಪತಿ ನಿಂಗಪ್ಪ ಶಿವಪುತ್ರಪ್ಪ ಸುಣಗಾರ
ವಯಸ್ಸುಃ 37 ವರ್ಷ,

8. ಮಂಜುನಾಥ ಬಸಪ್ಪ ಸುಣಗಾರ
ವಯಸ್ಸುಃ 31 ವರ್ಷ,

15. ಸವಿತಾ @ ಶಶಿಕಲಾ ಕೋಂ ರವೀಂದ್ರ ಸುಣಗಾರ
ವಯಸ್ಸುಃ 32 ವರ್ಷ,

20. ರೇಣಕವ್ವ ಕೋಂ ಬಸಪ್ಪ ಸುಣಗಾರ
ವಯಸ್ಸುಃ 53 ವರ್ಷ,

24. ಯಲ್ಲಪ್ಪ ಮಲ್ಲಪ್ಪ ರಾಮಲಿಂಗಣ್ಣನವರ @ ದೊಡ್ಡಲಿಂಗಣ್ಣನವರ
ವಯಸ್ಸುಃ 42 ವರ್ಷ,

25. ಗಂಗವ್ವ ಕೋಂ ಹನುಮಂತಪ್ಪ ನೆಗಳೂರ
ವಯಸ್ಸುಃ 58 ವರ್ಷ,

ಎಲ್ಲರೂ ಸಾಃ ಕೆಲವರಕೊಪ್ಪ, ತಾಃ ಹಾನಗಲ್

## ದೋಷಾರೋಪಣೆ

ಶ್ರೀ ಎನ್.ಎಂ. ರಮೇಶ, ಬಿ.ಕಾಂ. ಎಲ್.ಎಲ್.ಬಿ., ಎಲ್.ಎಲ್.ಎಂ. ಹಾವೇರಿಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎಂಬ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಹೊರಿಸುವ ದೋಷಾರೋಪಣೆಗಳೇನೆಂದರೆ,

1. ದಿನಾಂಕಃ11.06.2025 ರಂದು ಮುಂಜಾನೆ 9.00 ಗಂಟೆಗೆ ಚಾಸಾ-6 ಮತ್ತು 7 ರವರು ಚಾಸಾ-8 ರವರಿಂದ ಲಾವಣಿಗೆ ಪಡೆದ ಜಮೀನಿಗೆ ಬಿತ್ತನೆ ಮಾಡಲು ಟ್ರ್ಯಾಕ್ಟರ್ ನಂ.ಕೆಎ-27/ಟಿಬಿ-6592 ರಲ್ಲಿ ಕೆಲವರಕೊಪ್ಪ ಗ್ರಾಮದ ಮಾದೇವಪ್ಪ ಮಾಳಾಪುರ ಇವರ ಮನೆಯ ಹತ್ತಿರ ಸಾರ್ವಜನಿಕ ರಸ್ತೆ ಮೇಲೆ ಹೋಗುತ್ತಿರುವಾಗ ಆರೋಪಿತರಾದ ನೀವು ಬಿತ್ತನೆ ಮಾಡಲು ಹೊರಟಿರುವ ಜಮೀನು ನಮ್ಮದು, ಆ ಜಮೀನಿಗೆ ಹೋಗಬೇಡಿ ಅಂತಾ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಜಗಳ ತೆಗೆದಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ 189(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

2. ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-6 ಮತ್ತು 7ರವರೊಂದಿಗೆ ಜಗಳ ತೆಗೆದು, ದೊಂಬಿ ಎಬ್ಬಿಸಿದ್ದು ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್-2023 ಕಲಂ 191(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

3. ಮೂರನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಟ್ರ್ಯಾಕ್ಟರ್ ನಲ್ಲಿ ಹೋಗುತ್ತಿದ್ದ ಚಾಸಾ–6 ಮತ್ತು 7 ರವರನ್ನು ಅಡ್ಡಗಟ್ಟಿ ನಿಲ್ಲಿಸಿ ಅವರೊಂದಿಗೆ ಜಗಳ ತೆಗೆದಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ 126(2)ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

4. ನಾಲ್ಕನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ–6 ಮತ್ತು 7 ರವರೊಂದಿಗೆ ಜಗಳ ತೆಗೆದು, 1 ಮತ್ತು 3 ನೇ ಆರೋಪಿತರು ಕೈಯಿಂದ ಹೊಡಿ ಬಡಿ ಮಾಡಿದ್ದು, ಜಗಳ ಬಿಡಿಸಲು ಬಂದ ಪಿರ್ಯಾದಿಗೂ ಸಹ ಕಾಲಿನಿಂದ ಒದಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ 115(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

5. ಐದನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ–6 ಮತ್ತು 7 ರವರೊಂದಿಗೆ ಜಗಳ ತೆಗೆದು, 1 ಮತ್ತು 3 ನೇ ಆರೋಪಿತರು ಕೈಯಿಂದ ಹೊಡಿ ಬಡಿ ಮಾಡಿದ್ದು, ಜಗಳ ಬಿಡಿಸಲು ಬಂದ ಪಿರ್ಯಾದಿಗೆ ಮತ್ತು ಚಾಸಾ–6 ರವರಿಗೆ ಅವಮಾನಮಾಡುವ ಉದ್ದೇಶದಿಂದ ಚಪ್ಪಲಿಯಿಂದ 1 ಮತ್ತು 6 ನೇ ಆರೋಪಿತರು ಹೊಡೆದಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ 133 ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

6. ಆರನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ–6 ಮತ್ತು 7 ರವರೊಂದಿಗೆ ಜಗಳ ತೆಗೆದು, ಟ್ರ್ಯಾಕ್ಟರ್ ಗಾಲಿಯ ಗಾಳಿಯನ್ನು ತೆಗೆದು, ಕಲ್ಲುಗಳಿಂದ ಹೆಡ್ ಲೈಟ್ ಗಳನ್ನು ಒಡೆದು, ವೈರಿಂಗ್ ಗಳನ್ನು ಕಿತ್ತು ಹಾಕಿ, ಬ್ಯಾಟರಿಯನ್ನು ತೆಗೆದುಕೊಂಡು ಹೋಗಿ ಲುಕ್ಸಾನುಪಡಿಸಿ, ಸುಮಾರು ರೂ.34,500/– ಕಿಮ್ಮತ್ತಿನ ಹತ್ತು ಗೊಬ್ಬರ ಚೀಲ, 12 ಪ್ಯಾಕೆಟ್ ಗೋವಿನ ಜೋಳದ ಬೀಜ ಹಾಗೂ 50 ಕೆಜಿ ಭತ್ತದ ಬೀಜದ ಚೀಲವನ್ನು ತೆಗೆದುಕೊಂಡು ಹೋಗಿದ್ದು, ಆ ಮೂಲಕ ಆರೋಪಿತರಾದ ನೀವು ಬಿ.ಎನ್.ಎಸ್–2023 ಕಲಂ 324(3) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

7. ಏಳನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ–6 ಮತ್ತು 7 ರವರೊಂದಿಗೆ ಜಗಳ ತೆಗೆದು ಹೊಡಿ ಬಡಿ ಮಾಡಿದ್ದು, ಜಗಳ ಬಿಡಿಸಲು ಬಂದ ಚಾಸಾ–1–ಶೋಭಾ ಹರಿಜನ ಇವರ ಮೈ ಮೇಲೆ ಧರಿಸಿದ್ದ ಜಂಪರ್ ಹಿಡಿದು ಎಳೆದು, ನೆಲಕ್ಕೆ ಕೆಡವಿ, ಕಾಲುಗಳಿಂದ ಒದ್ದು, ಸಾರ್ವಜನಿಕವಾಗಿ ಮಹಿಳೆಯ ಮಾನಕ್ಕೆ ಅವಮಾನಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಬಿ.ಎನ್.ಎಸ್–2023 ಕಲಂ 76 ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

8. ಎಂಟನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ–6 ಮತ್ತು 7 ರವರೊಂದಿಗೆ ಜಗಳ ತೆಗೆದು, ಚಾಸಾ–6, 7 ಮತ್ತು ಚಾಸಾ–1 ರವರಿಗೆ ಸೂಳೀ ಮಕ್ಕಳಾ, ಹಾದರಗಿತ್ತಿ ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಬಿ.ಎನ್.ಎಸ್–2023 ಕಲಂ 352

ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

9. ಒಂಭತ್ತನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ–6 ಮತ್ತು 7 ರವರೊಂದಿಗೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಾಡಿ, ಹೊಡಿ–ಬಡಿ ಮಾಡಿದ್ದಲ್ಲದೇ, ಇನ್ನು ಮೇಲೆ ನೀವು ಲಾವಣಿ ಪಡೆದುಕೊಂಡ ಜಮೀನಿಗೇ ಹೋದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲಾ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಬಿ.ಎನ್.ಎಸ್–2023 ಕಲಂ 351(2) ಸಹ ಕಲಂ 190 ರಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

10. ಹತ್ತನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 6 ನೇ ಆರೋಪಿತರಾದ ನೀವು ಹಿಂದೂ ಗಂಗಾಮತ ಜಾತಿಗೆ ಸೇರಿದ್ದು, ಚಾಸಾ–1, 6 ಮತ್ತು 7 ರವರು ಹಿಂದೂ ಹರಿಜನ ಪರಿಶಿಷ್ಟ ಜಾತಿಗೆ ಸೇರಿದವರು ಅಂತಾ ಗೊತ್ತಿದ್ದರೂ ಸಹ ಅವರೊಂದಿಗೆ ಜಗಳ ತೆಗೆದು ಕೀಳು ಜಾತಿ ಸೂಳೇ ಮಕ್ಕಳಾ ಅಂತಾ ಸಾರ್ವಜನಿಕವಾಗಿ ಜಾತಿ ಎತ್ತಿ ಬೈದು ಅವಮಾನಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು SC/ST (POA) ಕಲಂ. 3(1)(r) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

11. ಹನ್ನೊಂದನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 6 ನೇ ಆರೋಪಿತರಾದ ನೀವು ಹಿಂದೂ ಗಂಗಾಮತ ಜಾತಿಗೆ ಸೇರಿದ್ದು, ಚಾಸಾ–1, 6 ಮತ್ತು 7 ರವರು ಹಿಂದೂ ಹರಿಜನ ಪರಿಶಿಷ್ಟ ಜಾತಿಗೆ ಸೇರಿದವರು ಅಂತಾ ಗೊತ್ತಿದ್ದರೂ ಸಹ ಅವರೊಂದಿಗೆ ಜಗಳ ತೆಗೆದು ಕೀಳು ಜಾತಿ ಸೂಳೇ ಮಕ್ಕಳಾ ಅಂತಾ ಸಾರ್ವಜನಿಕವಾಗಿ ಸಾರ್ವಜನಿಕರು ಕೇಳುವ ರೀತಿಯಲ್ಲಿ ಜಾತಿ ಎತ್ತಿ ಬೈದು ಅವಮಾನಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು

SC/ST (POA) ಕಲಂ. 3(1)(S) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

12. ಹನ್ನೆರಡನೇಯದಾಗಿ ಮೇಲೆ ಹೇಳಿದ ತಾರೀಖು, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 6 ನೇ ಆರೋಪಿತರಾದ ನೀವು ಹಿಂದೂ ಗಂಗಾಮತ ಜಾತಿಗೆ ಸೇರಿದ್ದು, ಚಾಸಾ–1, 6 ಮತ್ತು 7 ರವರು ಹಿಂದೂ ಹರಿಜನ ಪರಿಶಿಷ್ಟ ಜಾತಿಗೆ ಸೇರಿದವರು ಅಂತಾ ಗೊತ್ತಿದ್ದರೂ ಸಹ ಅವರೊಂದಿಗೆ ಜಗಳ ತೆಗೆದು ಕೀಳು ಜಾತಿ ಸೂಳೇ ಮಕ್ಕಳಾ ಅಂತಾ ಸಾರ್ವಜನಿಕವಾಗಿ ಜಾತಿ ಎತ್ತಿ ಬೈದು ಅವಮಾನಪಡಿಸಿ, ಹೊಡಿ–ಬಡಿ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು SC/ST (POA) ಕಲಂ. 3(2)(va) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಣೆಗಳಿಗಾಗಿ ಹಾವೇರಿ ವಿಶೇಷ ನ್ಯಾಯಾಧೀಶರ ನ್ಯಾಯಾಲಯದಲ್ಲಿ ನಿಮ್ಮ ಮೇಲೆ ಮೊಕದ್ದಮೆ ನಡೆಯತಕ್ಕದ್ದು ಅಂತಾ ಆದೇಶಿಸಿದ್ದೇನೆ.

ದಿನಾಂಕಃ18.11.2025
ಹಾವೇರಿ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು,
ಹಾವೇರಿ